# ಬಳ್ಳಾರಿಯಲ್ಲಿ ಜಮೀರ್ ಬಂಧನ, ಬಿಡುಗಡೆ

## ರೆಡ್ಡಿ ಮನೆ ಎದುರು ಧರಣಿಗೆ ಸಿಗದ ಅನುಮತಿ । ನಗರ ಹೊರವಲಯದಲ್ಲೇ ಪೊಲೀಸರ ವಶಕ್ಕೆ

ಬಳ್ಳಾರಿ: ಪೌರತ್ವ ಕಾಯ್ದೆ ಜನಜಾಗೃತಿ ಸಮಾವೇಶದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದ ನಗರ ಶಾಸಕ ಸೋಮಶೇಖರ ರೆಡ್ಡಿ ವಿರುದ್ಧ ಗುಟುರು ಹಾಕಿ ಅವರ ಮನೆ ಎದುರು ಧರಣಿ ನಡೆಸಲು ಬಂದಿದ್ದ ಚಾಮರಾಜಪೇಟೆ ಶಾಸಕ ಜಮೀರ್ ಅಹ್ಮದ್ ಬಳ್ಳಾರಿ ನಗರ ಹೊರವಲಯದಿಂದಲೇ ಬೆಂಗಳೂರಿಗೆ ವಾಪಸ್ ತೆರಳಿದ್ದಾರೆ.

ಸೋಮಶೇಖರ ರೆಡ್ಡಿ ಕ್ಷಮೆ ಯಾಚಿಸಬೇಕು, ಇಲ್ಲದಿದ್ದರೆ ಜ. 13ರಂದು ಅವರ ಮನೆ ಎದುರು ಧರಣಿ ನಡೆಸುವುದಾಗಿ ಜಮೀರ್ ಎಚ್ಚರಿಕೆ ನೀಡಿದ್ದರು. ಆದರೆ ಸೋಮಶೇಖರ ರೆಡ್ಡಿ ಜಮೀರ್ ಅಹ್ಮದ್ ಬಂದರೆ ನಮ್ಮ ಮನೆಯಲ್ಲಿ ಆತಿಥ್ಯ ನೀಡುವುದಾಗಿ ಹೇಳಿದ್ದರ ವಿನಃ ಕ್ಷಮೆ ಯಾಚಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಧರಣಿ ನಡೆಸಲು ಬಂದಿದ್ದ ಜಮೀರ್ ಅಹ್ಮದ್ ಅವರನ್ನು ಪೊಲೀಸರು ನಗರದ ಹೊರವಲಯದಲ್ಲಿ ಬಂಧಿಸಿ ನಂತರ ಬಿಡುಗಡೆಗೊಳಿಸಿದರು.

ಬೆಂಗಳೂರಿನಿಂದ ಬಂದ ಜಮೀರ್ ಅವರನ್ನು ಸ್ವಾಗತಿಸಲು ನಗರ ಹೊರವಲಯದ ಬೈಪಾಸ್ ಬಳಿ ಕಾಂಗ್ರೆಸ್ ಹಾಗೂ ಮುಸ್ಲಿಂ ಸಮುದಾಯದ ಹಲವು ಮುಖಂಡರು ಜಮಾಯಿಸಿದ್ದರು. ಮೆರವಣಿಗೆಯಲ್ಲಿ ಕರೆದೊಯ್ಯಲು ಧ್ವನಿವರ್ಧಕ ಅಳವಡಿಸಿದ್ದ ತೆರೆದ ವಾಹನ ಸಿದ್ಧಪಡಿಸಲಾಗಿತ್ತು. ಮುಂಜಾಗ್ರತಾ ಕ್ರಮ ಕೈಗೊಂಡಿದ್ದ ಪೊಲೀಸ್ ಇಲಾಖೆ ಸ್ಥಳದಲ್ಲಿ ಸಿಬ್ಬಂದಿ ನಿಯೋಜಿಸಿತ್ತು.



ಬಳ್ಳಾರಿ: ಶಾಸಕ ಸೋಮಶೇಖರ ರೆಡ್ಡಿ ಮನೆ ಎದುರು ಧರಣಿ ನಡೆಸಲು ನಗರಕ್ಕೆ ಸೋಮವಾರ ಆಗಮಿಸಿದ ಚಾಮರಾಜಪೇಟೆ ಶಾಸಕ ಜಮೀರ್ ಅಹ್ಮದ್.

ಬೆಳಗ್ಗೆ 10.30ರ ಸುಮಾರಿಗೆ ನಗರಕ್ಕೆ ಆಗಮಿಸಿದ ಜಮೀರ್ ಅವರನ್ನು ಪೊಲೀಸರು ನಗರ ಹೊರವಲಯದಲ್ಲೇ ತಡೆಯಲು ಯತ್ನಿಸಿದರು. ಯುವಕರು ಘೋಷಣೆಗಳನ್ನು ಕೂಗುತ್ತಿದ್ದಂತೆ ಕಾಲ್ನಡಿಗೆಯಲ್ಲಿ ಸ್ವಲ್ಪ ಮುಂದಕ್ಕೆ ಹೋಗಲು ಅವಕಾಶ ನೀಡಿದ ಪೊಲೀಸರು, 11 ಗಂಟೆ ಸುಮಾರಿಗೆ ಅವರನ್ನು ಬಂಧಿಸಿ ಸಮೀಪದ ಕುಡಿತಿನಿ ಠಾಣೆಗೆ ಕರೆದೊಯ್ದು ನಂತರ ಬಿಡುಗಡೆಗೊಳಿಸಿದರು.

ರೆಡ್ಡಿಯವರಿಗೆ ಬೇಲ್ ನೀಡಲು ನ್ಯಾಯಾಲಯ ನಿರಾಕರಿಸಿದೆ. ಆದರೂ ಪೊಲೀಸರು ಈವರೆಗೂ ರೆಡ್ಡಿಯನ್ನು ಏಕೆ ಬಂಧಿಸಿಲ್ಲ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇನ್ನೂ 10 ದಿನ ಕಾಲಾವಕಾಶ ನೀಡುತ್ತೇವೆ. ಅಷ್ಟರೊಳಗೆ ಬಂಧಿಸಬೇಕು. ಇಲ್ಲದಿದ್ದರೆ ಸಿದ್ದರಾಮಯ್ಯ ಅವರೊಂದಿಗೆ ಬಳ್ಳಾರಿಗೆ ಬಂದು ಪ್ರತಿಭಟನೆ ನಡೆಸಲಾಗುವುದು.

* ಜಮೀರ್ ಅಹಮದ್, ಶಾಸಕ

ಜಮೀರ್ ಅಹ್ಮದ್ ಧರಣಿ ನಡೆಸಲು ಅನುಮತಿ ಕೋರಿ ಮನವಿ ಸಲ್ಲಿಸಿದ್ದರೂ ನಾವು ಅನುಮತಿ ನೀಡಿರಲಿಲ್ಲ. ಅಲ್ಲದೆ ಜಿಲ್ಲಾಧಿಕಾರಿಗಳು ಹೊರಡಿಸಿದ್ದ ಆದೇಶ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ನಗರ ಹೊರವಲಯದ ಬೈಪಾಸ್ ರಸ್ತೆ ಬಳಿ ಅವರನ್ನು ಬಂಧಿಸಲಾಗಿದೆ. ಸ್ಟೇಷನ್ ಬೇಲ್ ನೀಡಿದ ಹಿನ್ನೆಲೆಯಲ್ಲಿ ವಾಪಸ್ ಹೋಗಿದ್ದಾರೆ.

* ಸಿ.ಕೆ.ಬಾಬಾ, ಬಳ್ಳಾರಿ ಎಸ್‌ಪಿ

## ಉಫ್ ಅಂದಿದ್ದಕ್ಕೆ ಜಮೀರ್ ಬೆಂಗಳೂರು ವಿಮಾನ ಹತ್ತಿದ!

ಬಳ್ಳಾರಿ: ನಾನು ಉಫ್ ಅಂತ ಊದಿದ್ದಕ್ಕೇನೇ ಜಮೀರ್ ಅಹ್ಮದ್ ಬೆಂಗಳೂರಿಗೆ ಫ್ಲೈಟ್ ಹತ್ತಿಕೊಂಡು ಹೋಗಿದ್ದಾನೆ ಎಂದು ಬಳ್ಳಾರಿ ನಗರ ಶಾಸಕ ಜಿ. ಸೋಮಶೇಖರ ರೆಡ್ಡಿ ಲೇವಡಿ ಮಾಡಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಚಾಮರಾಜ ಪೇಟೆ ಶಾಸಕ ಜಮೀರ್ ಅಹ್ಮದ್ ನನ್ನ ಮನೆ ಎದುರು ಧರಣಿಗೆ ಬಂದಿದ್ದರೆ ಬಾಳ ಚೆನ್ನಾಗಿರುತ್ತಿತ್ತು. ಒಳ್ಳೆಯ ಪರಿಣಾಮವೇ ಆಗುತ್ತಿತ್ತು, ಆ ದೇವರಿಗೆ ಗೊತ್ತಿರುತ್ತಿತ್ತು ನಾನು ಖಡ್ಗ ತೆಗೆದರೆ ಅವರಲ್ಲ, ಬೇರೆ ಯಾರೂ ಇರಲ್ಲ ಎಂದು ನಗುತ್ತಲೇ ಟೀಕಿಸಿದರು.

ನಾನು ಪ್ರತಿಭಟನೆ ಹೆಸರಲ್ಲಿ ದೇಶದ ಆಸ್ತಿ ಹಾಳು ಮಾಡುವವರ ವಿರುದ್ಧ ಮಾತಾಡಿದ್ದೇನೆ. ನೀನ್ಯಾವನಲೇ... ನನಗ ಸವಾಲು ಹಾಕಲು ಎಂದು ತಿರುಗೇಟು ನೀಡಿದ ಸೋಮಶೇಖರ ರೆಡ್ಡಿ, ನೀನು ಬೆಂಗಳೂರಿನವನು. ನಾವು ಬಳ್ಳಾರಿಯವರು. ನಿನ್ನ ಹಿಂದೆ ಬಂದವರು ಬಳ್ಳಾರಿಯವರಲ್ಲ, ನಿನ್ನ ಜೊತೆ ಕರೆದುಕೊಂಡು ಬಂದವರು ನಿನ್ನೂರಿನವರು. ಜಮೀರ್ ತಮ್ಮ ಕ್ಷೇತ್ರಕ್ಕೆ ಸೀಮಿತವಾಗಿರಬೇಕು. ಯಾರೂ ಸಹ ಅವರಿಗೆ ಕರ್ನಾಟಕ ಬರೆದು ಕೊಟ್ಟಿಲ್ಲ, ರಾಜ್ಯದ ಶಾಸಕರ ವಿರುದ್ಧ ಪ್ರತಿಭಟನೆ ಮಾಡುವ ಹಕ್ಕು ನೀಡಿಲ್ಲ, ಯಾರ ಯಾರ ಮನೆಗೋ ಹೋಗಿ ಧರಣಿ ಮಾಡ್ತೇನೆ ಎಂದರೆ ಸುಮ್ಮನೆ ಕೂರಲ್ಲ ಎಂದರು.